ಅಭಿಯಾನ ನಿರ್ದೇಶಕರ ಕಚೇರಿ
ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ

ಕರ್ನಾಟಕ ಸರ್ಕಾರ

Ph: 080-25599991/2/3
Email: daynulm@gmail.com
ನಂ.11, ಕೊಠಡಿ ಸಂ. 305, 3ನೇ ಮಹಡಿ,
ಬ್ಲೂಕ್ರಾಸ್ ಛೇಂಬರ್ಸ್ ಕಟ್ಟಡ,
ಇನ್‌ಫ್ಯಾಂಟ್ರಿ ಅಡ್ಡರಸ್ತೆ, ಬೆಂಗಳೂರು-560 001.

ನಂಃ ಅನಿಕ 31 ಡೇ-ನಲ್ಮ್ 2020-21 ದಿನಾಂಕಃ 20.05.2020

## ವಿವಿಧ ಹುದ್ದೆಗಳಿಗೆ ನೇಮಿಸಿಕೊಳ್ಳುವ ಕುರಿತು

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ 11 ತಿಂಗಳುಗಳಿಗೆ ಈ ಕೆಳಕಂಡ ಹುದ್ದೆಗಳಿಗೆ ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಬಯಸುವವರು ಸ್ವ-ವಿವರದ (Resume) ಪ್ರತಿ, ವಿದ್ಯಾರ್ಹತೆ ಹಾಗೂ ಅನುಭವ ಮುಂತಾದ ಅಗತ್ಯ ದಾಖಲೆಗಳನ್ನು ಪಿಡಿಎಫ್ ಸ್ಕ್ಯಾನ್ ಮಾಡಿ ದಿನಾಂಕಃ 30.05.2020ರೊಳಗಾಗಿ ಇ-ಮೇಲ್ ಐ.ಡಿಃ hrdaynulmkarnataka@gmail.com ಗೆ ಸಲ್ಲಿಸಬಹುದಾಗಿದೆ.

| ಕ್ರ.ಸಂ. | ಹುದ್ದೆಯ ಹೆಸರು | ಸಂಖ್ಯೆ |
|---|---|---|
| 1 | ರಾಜ್ಯ ಅಭಿಯಾನ ವ್ಯವಸ್ಥಾಪಕರು (ಆಶ್ರಯ ಮತ್ತು ಸಾಮಾಜಿಕ ಮೂಲಸೌಕರ್ಯ) | 01 |
| 2 | ರಾಜ್ಯ ಅಭಿಯಾನ ವ್ಯವಸ್ಥಾಪಕರು (ಆರ್ಥಿಕ ಒಳಗೊಳ್ಳುವಿಕೆ ಮತ್ತು ಕಿರು ಉದ್ದಿಮೆ) | 01 |
| 3 | ರಾಜ್ಯ ಅಭಿಯಾನ ವ್ಯವಸ್ಥಾಪಕರು (ಎಂ.ಐ.ಎಸ್.,&ಎಂ.ಇ) | 01 |
| 4 | ಮಲ್ಟಿಟಾಸ್ಕಿಂಗ್ ಅಫಿಷಿಯಲ್ಸ್ | 01 |

| ಕ್ರ.ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಕ್ರೋಢೀಕೃತ ವೇತನ (ಮಾಹೆಯಾನ) | ವಿದ್ಯಾರ್ಹತೆ ಮತ್ತು ಅನುಭವ | ಸಮರ್ಥತೆ |
|---|---|---|---|---|---|
| 1 | ರಾಜ್ಯ ಅಭಿಯಾನ ವ್ಯವಸ್ಥಾಪಕರು – ಆಶ್ರಯ ಮತ್ತು ಸಾಮಾಜಿಕ ಮೂಲಸೌಕರ್ಯ<br><br>ವಯೋಮಿತಿ – 65 ವರ್ಷದೊಳಗೆ | 1 ಹುದ್ದೆ | ಗರಿಷ್ಠ ಮಿತಿ ರೂ.75,000/- | ಅಂಗೀಕೃತ ವಿಶ್ವವಿದ್ಯಾಲಯದಿಂದ ಎರಡು ಪೂರ್ಣ ವರ್ಷಗಳ ಸ್ನಾತಕೋತ್ತರ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್/ ಎಂಬಿಎ ಅಥವಾ ತತ್ಸಮಾನ ಸ್ನಾತಕೋತ್ತರ ಪದವಿಯೊಂದಿಗೆ 5 ವರ್ಷಗಳ ಸೇವಾನುಭವ ಹೊಂದಿರಬೇಕು.<br>**ಅಥವಾ**<br>ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯೊಂದಿಗೆ, ಸಮುದಾಯ ಮೂಲಸೌಕರ್ಯಗಳಾದ ಸಾಮಾಜಿಕ ಅಭಿವೃದ್ಧಿ ಮತ್ತು ಸ್ಥಾಪನೆ/ ಮೇಲುಸ್ತುವಾರಿ / ನಿರ್ವಹಣೆಗಳನ್ನೊಳಗೊಂಡ ಬಡತನ ನಿರ್ಮೂಲನಾ ಯೋಜನೆಗಳಲ್ಲಿ 8 ವರ್ಷಗಳ ಸೇವಾನುಭವವನ್ನು ಹೊಂದಿರಬೇಕು.<br><br>ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪರಿಣಿತಿಯನ್ನು ಹೊಂದಿರಬೇಕು. | ಅಭ್ಯರ್ಥಿಯು ಕಂಪ್ಯೂಟರ್ ಎಂ.ಎಸ್ ಆಫೀಸ್‌ನಲ್ಲಿ ಅನುಭವ, ಇತರೆ ಪಾಲುದಾರ ವ್ಯವಸ್ಥಾಪನೆಯೊಂದಿಗೆ ಸಮರ್ಥವಾಗಿ ವ್ಯವಹರಿಸುವ ಅನುಭವ, ಉತ್ತಮ ವಿಶ್ಲೇಷಣಾ ಜ್ಞಾನ ಮತ್ತು ಯೋಜನೆ ರೂಪಿಸುವಲ್ಲಿ ತಂತ್ರಗಾರಿಕಾ ಕೌಶಲ್ಯ, ದೊಡ್ಡ ಪ್ರಮಾಣದಲ್ಲಿ ಯೋಜನೆ ರೂಪಿಸುವುದು ಮತ್ತು ಎಂ.ಐ.ಎಸ್., ನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರತಕ್ಕದ್ದು.<br><br>ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. |

---2

Scanned by CamScanner

| | | | | | |
|---|---|---|---|---|---|
| 2 | ರಾಜ್ಯ ಅಭಿಯಾನ ವ್ಯವಸ್ಥಾಪಕರು (ಎಂ.ಐ.ಎಸ್., & ಎಂ.ಇ.,)<br><br>ವಯೋಮಿತಿ – 65 ವರ್ಷದೊಳಗೆ | 1 ಹುದ್ದೆ | ಗರಿಷ್ಠ ಮಿತಿ ರೂ.75,000/– | ಅಂಗೀಕೃತ ಸಂಸ್ಥೆ / ವಿಶ್ವವಿದ್ಯಾಲಯದಿಂದ ಎರಡು ಪೂರ್ಣ ವರ್ಷಗಳ ಸ್ನಾತಕೋತ್ತರ ಡಿಪ್ಲೊಮಾ / ಮಾಸ್ಟರ್ಸ್ ಇನ್ ಕಂಪ್ಯೂಟರ್ ಸೈನ್ಸ್., ಎಂ.ಎಸ್ಸಿ., (ಕಂಪ್ಯೂಟರ್ ಸೈನ್ಸ್), ಬಿ.ಟೆಕ್., (ಕಂಪ್ಯೂಟರ್ ಸೈನ್ಸ್)ದೊಂದಿಗೆ ಬಡತನ ನಿರ್ಮೂಲನೆಗೆ ಸಂಬಂಧಿಸಿದ ದೊಡ್ಡ ಮಟ್ಟದ ಅಭಿವೃದ್ಧಿ ಯೋಜನೆಗಳಿಗೆ ವ್ಯವಸ್ಥಾಪನಾ ಮಾಹಿತಿ ವ್ಯವಸ್ಥೆ ಮತ್ತು ಕಿರು ಉದ್ದಿಮೆ ವಿನ್ಯಾಸಗೊಳಿಸಿದ ಮತ್ತು ಅನುಷ್ಠಾನಗೊಳಿಸಿದ ಅನುಭವ ಹಾಗೂ ದತ್ತಾಂಶ ವಿಶ್ಲೇಷಣೆಯ ಸಂಪೂರ್ಣ ತಿಳುವಳಿಕೆ ಹೊಂದಿರಬೇಕು.<br><br>ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪರಿಣಿತಿಯನ್ನು ಹೊಂದಿರಬೇಕು. | ಅಭ್ಯರ್ಥಿಯು ಮೇಲೆ ತಿಳಿಸಿದ ಸಾಮರ್ಥ್ಯಗಳ ಜೊತೆಗೆ ಉತ್ತಮ ದಾಖಲಾತಿ ನಿರ್ವಹಣಾ ಕೌಶಲ್ಯ ಮತ್ತು ವರದಿಗಳನ್ನು ಸಿದ್ಧಪಡಿಸುವಿಕೆಯಲ್ಲಿ ಅತ್ಯುತ್ತಮ ಕೌಶಲ್ಯ, ಯೋಜನಾ ನಿರ್ವಹಣಾ ದತ್ತಾಂಶ, ದತ್ತಾಂಶ ನಿರ್ವಹಣಾ ವ್ಯವಸ್ಥೆ, ಜಾಲತಾಣ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಅತ್ಯುತ್ತಮ ಪ್ರಾವಿಣ್ಯತೆ ಹೊಂದಿರತಕ್ಕದ್ದು.<br><br>ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. |
| 3 | ರಾಜ್ಯ ಅಭಿಯಾನ ವ್ಯವಸ್ಥಾಪಕರು (ಆರ್ಥಿಕ ಒಳಗೊಳ್ಳುವಿಕೆ ಮತ್ತು ಕಿರು ಉದ್ದಿಮೆ)<br><br>ವಯೋಮಿತಿ – 65 ವರ್ಷದೊಳಗೆ | 1 ಹುದ್ದೆ | ಗರಿಷ್ಠ ಮಿತಿ ರೂ.75,000/– | ಅಭ್ಯರ್ಥಿಯು ಅಂಗೀಕೃತ ಸಂಸ್ಥೆಯಿಂದ ಎರಡು ಪೂರ್ಣ ವರ್ಷಗಳ ಸ್ನಾತಕೋತ್ತರ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್/ಎಂಬಿಎ ಅಥವಾ ತತ್ಸಮಾನ ಸ್ನಾತಕೋತ್ತರ ಪದವಿಯೊಂದಿಗೆ 5 ವರ್ಷಗಳ ಕಾರ್ಯಾನುಭವ ಹೊಂದಿರಬೇಕು.<br><br>**ಅಥವಾ**<br><br>ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯೊಂದಿಗೆ ಸಾಲ ಜೋಡಣೆ, ಸಾಮಾಜಿಕ ಭದ್ರತೆ ಮತ್ತು/ಅಥವಾ ಕಿರು ಉದ್ದಿಮೆಗಳ ಪ್ರಚಾರ ಕುರಿತು ಬಡತನ ನಿರ್ಮೂಲನಾ ಯೋಜನೆ / ಆರ್ಥಿಕ ಸಂಸ್ಥೆಗಳಲ್ಲಿ 8 ವರ್ಷಗಳ ಸೇವಾನುಭವ ಹೊಂದಿರಬೇಕು. | ಅಭ್ಯರ್ಥಿಯು ಕಂಪ್ಯೂಟರ್ ಎಂ.ಎಸ್ ಆಫೀಸ್‌ನಲ್ಲಿ ಅನುಭವ, ಇತರೆ ಪಾಲುದಾರ ವ್ಯವಸ್ಥಾಪನೆಯೊಂದಿಗೆ ಸಮರ್ಥವಾಗಿ ವ್ಯವಹರಿಸುವ ಅನುಭವ, ಉತ್ತಮ ವಿಶ್ಲೇಷಣಾ ಜ್ಞಾನ ಮತ್ತು ಯೋಜನೆ ರೂಪಿಸುವಲ್ಲಿ ತಂತ್ರಗಾರಿಕಾ ಕೌಶಲ್ಯ, ದೊಡ್ಡ ಪ್ರಮಾಣದಲ್ಲಿ ಯೋಜನೆ ರೂಪಿಸುವುದು ಮತ್ತು ಎಂ.ಐ.ಎಸ್., ನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರತಕ್ಕದ್ದು.<br><br>ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. |

ಅಬುಂಧತಿ

---3

Scanned by CamScanner

| | | | | | |
|---|---|---|---|---|---|
| 4 | ಮಲ್ಟಿಟಾಸ್ಕಿಂಗ್ ಅಫಿಷಿಯಲ್ಸ್<br><br>ವಯೋಮಿತಿ – 65 ವರ್ಷದೊಳಗೆ | 1 ಹುದ್ದೆ | ಗರಿಷ್ಠ ಮಿತಿ ರೂ.40,000/- | ಅಭ್ಯರ್ಥಿಯು ಅಂಗೀಕೃತ ವಿಶ್ವವಿದ್ಯಾಲಯದ ಪದವಿಯೊಂದಿಗೆ, ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಕಂಪ್ಯೂಟರ್ ಜ್ಞಾನ, ಎಂ.ಎಸ್., ವರ್ಡ್, ಎಕ್ಸೆಲ್, ಪಿ.ಪಿ.ಟಿ ಬಗ್ಗೆ ಪರಿಣಿತಿಯನ್ನು ಹಾಗೂ 5 ವರ್ಷಗಳ ಸೇವಾನುಭವ ಹೊಂದಿರಬೇಕು. | ಅಭ್ಯರ್ಥಿಯು ಕಂಪ್ಯೂಟರ್ ಎಂ.ವಿಸ್ ಆಫೀಸ್, ಇ-ಮೇಲ್, ವೆಬ್‌ಸೈಟ್ ಹಾಗೂ ಪಿ.ಪಿ.ಟಿಯ ನಿರ್ವಹಣೆಯ ಬಗ್ಗೆ ಸಾಮರ್ಥ್ಯವನ್ನು ಹೊಂದಿರತಕ್ಕದ್ದು. ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಟೈಪಿಂಗ್ ಕೌಶಲ್ಯ ಹೊಂದಿರಬೇಕು.<br>ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. |

ಅರುಂಧತಿ 20/5/20

(ಡಾ.ಅರುಂಧತಿ ಚಂದ್ರಶೇಖರ್, ಭಾ.ಆ.ಸೇ.)
ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ
ಬೆಂಗಳೂರು.

Scanned by CamScanner